**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 2397/2023 | | | |
|---|---|---|---|
| ಸಾಕ್ಷಿದಾರರ ಹೆಸರು | ಶಾಮರಾಜ | | |
| ತಂದೆ:ಹೆಸರು | ವೆಂಕಟಸ್ವಾಮಿರಾಜು | ಪಿಡಬ್ಲೂ: | 5 |
| ವಯಸ್ಸು: | 48 ವರ್ಷ | ಸಿಡಬ್ಲೂ: | 5 |
| ಉದ್ಯೋಗ: | ಕೆ ಎಸ್ ಆರ್ ಟಿ ಸಿ ಚಾಲಕ | | |
| ವಾಸ ಸ್ಥಳ: | ಶ್ರೀನಿವಾಸಪುರ ಗ್ರಾಮ | | |

**ದಿನಾಂಕ: 17-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

ಸಾಕ್ಷಿಗೆ ಕೃತ್ಯ ನಡೆದ ಸ್ಥಳ ಪಂಚನಾವೆಯಲ್ಲಿರುವ ಸಹಿ ಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಾನು 3 ವರ್ಷಗಳ ಹಿಂದೆ ಚೇಳೂರು ಸರ್ಕಲ್ ನಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ನಮ್ಮ ಇಲಾಖೆಯ ಬಸ್ ಚಾಲಕರ ಮಧ್ಯೆ ಗಲಾಟೆ ಆಗಿರುವ ವಿಚಾರದಲ್ಲಿ ಪೊಲಿಸರು ಮಹಜರ್ ಅನ್ನು ಜರುಗಿಸಿರುತ್ತಾರೆ. ಅದಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10 ರವರೆಗೆ ಜರುಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ.ಡಿ ಕೆ ಆರೋಪಿ ಪರ ವಕೀಲರಿಂದ:-**

ಮಹಜರ್ ಗೆ ಸೇರಿದಾಗ ಎಷ್ಟು ಜನ ಸೇರಿರುತ್ತಾರೆ ಎಂದರೆ 5-6 ಜನ ಇದ್ದರು. ಮಹಜರ್ ಗೆ ಬರಬೇಕೆಂದು ನೋಟಿಸ್ ಕೊಟ್ಟಿರುತ್ತಾರಾ ಎಂದರೆ ನೋಟಿಸು ಕೊಟ್ಟಿಲ್ಲ

ಹೇಳಿರುತ್ತಾರೆ. ಆ ದಿನದಂದು ನೀವು ಯಾವ ರೂಟ್ ನಲ್ಲಿ ಹೋಗುತ್ತಿದ್ದಿರಿ ಎಂದರೆ ಚೇಳೂರು ರಸ್ತೆಗೆ ಹೋಗುತ್ತಿದ್ದೆ ಎಂದು ಹೇಳುತ್ತಾರೆ. ಚಾಸಾ–1 ರವರು ನಿಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಾರೆ ಆದ ಕಾರಣ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸ್ಥಳಕ್ಕೂ ಮತ್ತು ಹೋಗಿಲ್ಲ ಸಹಿ ಮಾಡಿಲ್ಲ ಎಂದರೆ ಮಾಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.